

# ದುಬಾರಿ ಸೀರೆ

ಈ ಸೀರೆಯ ಬೆಲೆ ಕೇವಲ 40 ಲಕ್ಷ ರೂಪಾಯಿ. ವಿಶ್ವದಲ್ಲೇ ಅತ್ಯಂತ ದುಬಾರಿ ಸೀರೆಯೆಂದು ಖ್ಯಾತಿ ಪಡೆದ ಈ ಸೀರೆ ಗಿನ್ನೆಸ್ ದಾಖಲೆ ನಿರ್ಮಿಸಿದೆ. ಈ ಸೀರೆಯನ್ನು ಚಿನ್ನದ ಎಳೆಗಳಿಂದ ನೇಯಲಾಗಿದೆ. ಒಡಲಿನಲ್ಲಿ ಹಾಗೂ ಸೆರಗಿನಲ್ಲಿ ಖ್ಯಾತ ಚಿತ್ರಕಾರ ರಾಜಾ ರವಿವರ್ಮನ 11 ಚಿತ್ರಗಳನ್ನೂ, ಅಂಚಿನಲ್ಲಿ 20ನೇ ಶತಮಾನದ ಚಿತ್ರಕಾರರ 10 ಚಿತ್ರಗಳನ್ನೂ ಅಳವಡಿಸಲಾಗಿದೆ. ಸೀರೆಯ ಸೊಬಗನ್ನು ಹೆಚ್ಚಿಸಲು ನವರತ್ನಗಳಾದ ವಜ್ರ, ವೈಢೂರ್ಯ, ಗೋಮೇಧಿಕ, ಪುಷ್ಯರಾಗ, ಮಾಣಿಕ್ಯ, ನೀಲ, ಮರಗತ, ಮುತ್ತು ಮತ್ತು ಹವಳಗಳನ್ನು ಅಳವಡಿಸಲಾಗಿದೆ.

ಈ ಸೀರೆಯನ್ನು ನೇಯ್ದದ್ದು ಕಾಂಚೀಪುರಂನಲ್ಲಿರುವ ಚೆನ್ನೈ ಸಿಲ್ಕ್ ಮಿಲ್. ಇದಕ್ಕಾಗಿ 36 ಮಂದಿ ಕುಶಲ ನೇಕಾರರು ಶ್ರಮಿಸಿದ್ದಾರೆ. ಅಪ್ಪಟ ಕೈ ಮಗ್ಗದ ಈ ಸೀರೆಯನ್ನು ನೇಯಲು ಬೇಕಾದ ಸಮಯ ಒಂದು ವರ್ಷ. ಸೀರೆಯ ತೂಕ 8 ಕೆಜಿ. ಈ ಭಾರೀ ಸೀರೆಯನ್ನು ಖ್ಯಾತ ಕೈಗಾರಿಕೋದ್ಯಮಿ ಮುಖೇಶ್ ಅಂಬಾನಿಯವರ ಪತ್ನಿ ನೀತಾ ಅಂಬಾನಿ ಖರೀದಿಸಿದ್ದಾರೆ.

■ ಪದ್ಮಜಾ ಸುಂದರೇಶ್

